ಎಚ್. ಸಿದ್ದಾರ್ಥ ಹೆಬ್ಬಾರ, ಈದು
*ದಂತ ಕತೆ ಎಂದರೇನು?*



ವೀರಪ್ಪನ್ ಜೀವನಚರಿತ್ರೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಎಲ್ಲ ಕೊಟ್ಟ ಭೂಮಿತಾಯಿಗೇಕೆ ಎಲ್ಲರೂ ಉಗುಳುತ್ತಾರೆ?*
ಆಕಾಶಕ್ಕೆ ಉಗಿದರೆ ತಮಗೇ ಬೀಳುತ್ತದಲ್ಲ! ಕೆಳಗಿರುವವರು, ಸುಮ್ಮನಿರುವವರೇ ಉಗಿಸಿಕೊಳ್ಳುವುದು!

ಬಸವನಗೌಡ ಹೆಬ್ಬಿಗೆರೆ, ದಾವಣಗೆರೆ
*ಬಡವನ ಕೋಪ ದವಡೆಗೆ ಮೂಲ; ಮಡದಿಯ ಕೋಪ...?*
ಒಂದೇ ಚಕ್ಕುಲಿಗೆ ಗಂಡನ ಇಡೀ ದಂತಪಂಕ್ತಿಗೇ ಮೂಲ!

ಎನ್.ಎಂ. ಅನಂತಪದ್ಮನಾಭ, ಮೈಸೂರು
*ಷಷ್ಠ್ಯಾಬ್ದಿಯಲ್ಲಿ ಅದೇ ಹೆಂಡತಿಯನ್ನು ಮತ್ತೆ ಮದುವೆಯಾಗುವುದೇಕೆ?*
ಬೇರೆಯವರನ್ನೇ ಆಗಬಹುದಿತ್ತು. ಆದರೆ ಕಿಶೋರಿಯರು ದಕ್ಕುವುದಿಲ್ಲ, 55ರ ನೂತನ ಕನ್ಯೆಯರು ಸಿಕ್ಕುವುದಿಲ್ಲ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್ಐ ಕ್ಯಾಂಪಸ್
*ಸುನಾಮಿಗೂ, ಬೇನಾಮಿಗೂ ಏನು ವ್ಯತ್ಯಾಸ?*
ಸುನಾಮಿಯಿಂದ ಅಸ್ಥಿ, ಬೇನಾಮಿಯಿಂದ ಆಸ್ತಿ!

ಹೆಚ್.ಆರ್. ಕಡಿವಾಲ, ಬದಾಮಿ
*ಪಕ್ಷಿ, ಪ್ರಾಣಿಗಳಲ್ಲಿರುವ ಗುಣ ಮನುಷ್ಯನಿಗೆ ಏಕಿಲ್ಲ?*



ಇರದೇ ಏನು.. ಹದ್ದಿನಂತೆ ಎರಗುತ್ತಾನೆ, ನಾಯಿಯಂತೆ ಬೊಗಳುತ್ತಾನೆ, ಹಾವು-ಮುಂಗುಸಿಗಳಂತೆ ಕಚ್ಚಾಡುತ್ತಾನೆ.....

ಚೈತ್ರ ಕೆ.ಎನ್. ತುಮಕೂರು
*ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನೇ ಇಲ್ಲವಾದರೆ ಅಖಿಲಾಂಡಕೋಟಿ ಬ್ರಹ್ಮಾಂಡದ ಪರಿಸ್ಥಿತಿ ಏನಾಗುವುದು?*
ಬೋಳು ಟೈರಿನ ಕಾರು ಎಣ್ಣೆ ಚೆಲ್ಲಿದ ರಸ್ತೆಯಲ್ಲಿ ಸ್ಕಿಡ್ ಆದಂತೆ ಅಡ್ಡಾದಿಡ್ಡಿ ಸಾಗುತ್ತದೆ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ಕೆಲಸ ಕೇಳಲು ಹೋದಾಗ ಅನುಭವ ಇದೆಯಾ? ಎನ್ನುವವರು ಹೆಣ್ಣು ನೋಡಲು ಹೋದಾಗ ಹಾಗೆ ಕೇಳುವುದಿಲ್ಲವಲ್ಲಾ...?*
ನೀವು ಹೆಣ್ಣಿನತ್ತ ಪೆಕರುಪೆಕರಾಗಿ ನೋಡುವ ದೃಷ್ಟಿಯಲ್ಲೇ ಅವರಿಗೆ ಎಲ್ಲಾ ತಿಳಿದುಬಿಡತ್ತಂತೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರೀಯಪ್ಪಾ, ಅಮ್ಮನ ಮನಸ್ಸು ಅಮೃತವಾದರೆ ಹೆಂಡತಿಯ ಮನಸ್ಸು?*
ಶುದ್ಧ ಗಂಗಾಜಲ! ಕುಡಿಯಲೂ ಸೈ, ಕಡೆಯಲೂ ಸೈ!

ಎಂ.ಎನ್. ಸೋಮಶೇಖರ್, ಮೈಸೂರು
*ನಮ್ಮ ಐದೂ ಬೆರಳುಗಳು ಒಂದೇ ಸಮನಾಗಿದ್ದಿದ್ದರೆ ಏನಾಗುತ್ತಿತ್ತು?*
ತಟ್ಟಿದ ಒಬ್ಬಟ್ಟು, ರೊಟ್ಟಿಗಳೆಲ್ಲಾ ರೌಂಡ್ ಬದಲು ಸ್ಕ್ವೇರ್ ಆಗಿರುತ್ತಿದ್ದವು!

ವಿ.ಹೇಮಂತಕುಮಾರ, ಬೆಂಗಳೂರು
*ಗೆಳತಿಗೂ, ಪ್ರೇಯಸಿಗೂ, ಶ್ರೀಮತಿಗೂ ಇರುವ ವ್ಯತ್ಯಾಸವೇನು?*
ಗೆಳತಿ ಅಲೆ, ಪ್ರೇಯಸಿ ಸುಳಿ, ಶ್ರೀಮತಿ ಸುನಾಮಿ!

ರಮೇಶ್, ಹನುಮನಾಳು
*ಪ್ರಪಂಚದಲ್ಲಿ ಕಣ್ಣೇ ಇಲ್ಲದೆ ಇರುವ ವ್ಯಕ್ತಿ ಯಾರು...?*
ಕುರುಡು ಪ್ರೀತಿ, ಕುರುಡು ನಂಬಿಕೆ ಇರುವವರು!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ವರುಣ ಯಾವ ಪೂಜೆಗೆ ಒಲಿಯುತ್ತಾನೆ?*
ಹಸಿರೇ ಉಸಿರು ಎಂಬ ಬೀಜಮಂತ್ರ ಜಪಿಸುತ್ತಾ, ಕಾಡು ಬೆಳೆಸುವ ಪೂಜೆಗೆ.

ಪಟ್ಟೆಸೋಮನಹಳ್ಳಿ, ಗಾನಾಸುಮಾ, ಪಾಂಡವಪುರ
*ಹೆಣ್ಣು, ಹೊನ್ನು, ಮಣ್ಣು ಬಿಟ್ಟರೆ ಇಷ್ಟ ಪಡೋಕೆ ಈ ಭೂಮಿಯ ಮೇಲೆ ಬೇರೆ ಇಲ್ವಾ?*
ಮ್ಯಾಂಗನೀಸ್ ಕಲ್ಲನ್ನೇ ಮರೆತಿರಲ್ಲಾ ಎಂದರಂತೆ ರೆಡ್ಡಿ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮೊದಲ ಪ್ರೇಮ ಮೊಗ್ಗು, ಮದುವೆ ಅರಳಿದ ಹೂವು, ವೃದ್ಧಾಪ್ಯ...?*
ಹಣ್ಣುಹಣ್ಣು!

## ಬಹುಮಾನಿತ ಪ್ರಶ್ನೆ

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ಇಷ್ಟು ವರ್ಷ ಗಾಂಧಿ ತಾತ, ನೆಹರೂ ಚಾಚಾ ಎಂದು ಹೇಳುತ್ತಾ ಮುದುಕನಾದೆ. ಇನ್ನು ಮುಂದೆ ಏನೆಂದು ಬಡಬಡಿಸಲಿ?*
ಕಾಲಕ್ಕೆ ತಕ್ಕಂತೆ ಇರಿ; ಗಾಂಧಿ ಅಂಕಲ್, ನೆಹರೂ ಅಂಕಲ್, ಓಬವ್ವ ಆಂಟಿ, ಇಂದಿರಾ ಆಂಟಿ, ಸೋನಿಯಾ ಮೇಡಮ್ ಎನ್ನಿ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ವೈಎನ್‌ಕೆ, ಬೀಚಿ, ನವರತ್ನರಾಂ, ಜಿ.ಪಿ. ರಾಜರತ್ನಂ, ಮಾ. ಹಿರಣ್ಣಯ್ಯರಂಥವರೆಲ್ಲಾ ಒಂದೆಡೆ ಸೇರಿದರೆ ಏನಾಗಬಹುದು?*
ವಿಧವಿಧವಾದ ರಸಭರಿತ ಸಾಹಿತ್ಯ, ಸಂಭಾಷಣೆಗಳ ಬೊಂಬಾಟ್ ಭೋಜನ!

ಮಲ್ಲನಗೌಡ ಸಿ. ಪಾಟೀಲ, ರಂಭಾಪುರ
*ಹೆಣ್ಣು, ಹೊನ್ನು, ಮಣ್ಣು ಈ ಮೂರರಲ್ಲಿ ಶ್ರೇಷ್ಠವಾದುದು ಯಾವುದು?*
ಯಾರೂ ನಾನು ಹೆಣ್ಣಿನ ಮಗ, ನಾನು ಹೊನ್ನಿನ ಮಗ ಎಂದು ಹೇಳಿಕೊಳ್ಳದೆ ನಾನು ಮಣ್ಣಿನ ಮಗ ಎಂದು ಮಾತ್ರ ಹೇಳಿಕೊಳ್ಳುವುದರಿಂದ ಮಣ್ಣೇ ಶ್ರೇಷ್ಠ!

ಮುರಲೀಧರ ಕುಲಕರ್ಣಿ, ಬೀದರ್
*ಮದುವೆಯಲ್ಲಿ ಮದುಮಗಳು ಕೆಂಪುಬಣ್ಣದ ಉಡುಪನ್ನೇ ಏಕೆ ಧರಿಸುತ್ತಾಳೆ?*



ಏಕೆಂದರೆ ಕೆಂಪು ಅಪಾಯದ ಮುನ್ಸೂಚನೆ!

ಹಾಡ್ಯ ಬಿ. ಜಯಾನಂದ, ಮೈಸೂರು
*ಹಿಂದೆ ಕವಿಗಳು ಮಹಿಳೆಯರನ್ನು ಬಳ್ಳಿಗೆ ಹೋಲಿಸುತ್ತಿದ್ದರು. ಈಗ...?*
ಈಗ ಹಾಗೆ ಹೋಲಿಸಲಾಗದು ಬಿಡಿ; ಈಗ ಬಳುಕುವ ಸೊಂಟಕ್ಕಿಂತಾ ಉಳುಕುವ ಸೊಂಟವೇ ಹೆಚ್ಚು!

ಎಸ್.ಸಿ. ರಮೇಶ್, ಮೈಸೂರು
*ಮದಿರೆ ಮತ್ತು ಮಾನಿನಿ ಈ ಎರಡರಲ್ಲಿ ಯಾವುದು ಹೆಚ್ಚು ಅಪಾಯಕಾರಿ ಗುರುವೆ?*
ಮಾನಿನಿಯಿಂದ ಹೆಚ್ಚೆಂದರೆ ಹಲವು ಮನೆಗಳು ಹಾಳು; ಮದಿರೆಯಿಂದ ಇಡೀ ಯುವಜನಾಂಗವೇ ಹಾಳು!

■ ರಾಮ್